
‘ಅದೇ ಕಣೋ, ಹಸಿರಾಗಿದೆಯಲ್ಲ... ನಿಂತೂ ನಿಂತೂ ಮುಂದೆ ಹೋಗುತ್ತಿದೆಯಲ್ಲ, ಬಾಲ ಸಿಂಬೆ ಮಾಡಿದಂತೆ ಕಾಣುತ್ತಿದೆಯಲ್ಲ, ಎಲೆಗಳ ಬಣ್ಣವೇ ಇದೆ, ಸರಿಯಾಗಿ ನೋಡು’ ಎಂದಾಗ ಉದುರುತ್ತಿದ್ದ ಚಡ್ಡಿಯನ್ನು ಸರಿಪಡಿಸಿಕೊಂಡು ಅದಕ್ಕೆ ಕಲ್ಲು ಬೀರಿದ್ದೆ. ಧೊಪ್ಪೆಂದು ಕೆಳಕ್ಕೆ ಬಿತ್ತು. ಒಂದು ನಿಮಿಷದಲ್ಲೇ ಒದ್ದಾಡಿ ನೆಲಕಚ್ಚಿತು. ಯುದ್ಧ ಗೆದ್ದ ಸಂಭ್ರಮ. ಶತ್ರುವನ್ನು ಉರುಳಿಸಿದ ಜೋಷು.

‘ಊಸರವಳ್ಳಿ. ಅದನ್ನು ಹಿಂಡಿ ವಿಷ ತೆಗೆದು ಕೈಮದ್ದು ಹಾಕುತ್ತಾರಂತೆ. ಬಡ್ಡಿಮಗಂದು’ ಎಂದ ನನ್ನ ಗೆಳೆಯ ರಂಗ. ಹಳ್ಳಿಯ ಪರಿಸರದಲ್ಲಿ ಹುಟ್ಟಿ, ಬೇಲಿಯಲ್ಲಿ ಏನಿದೆ ಎಂದು ತಿಳಿಯುವುದಕ್ಕೆ ಕಸರತ್ತು ಮಾಡಬೇಕಾಗಿರಲಿಲ್ಲ. ಹಾವು ಕಂಡಾಗ ಓಡಿ, ಚೇಳು ಕಂಡಾಗ ಜಜ್ಜಿ, ಅದೇನೋ ಸಂಭ್ರಮಿಸುತ್ತಿದ್ದ ದಿನಗಳವು. ಎಲ್ಲೋ ತಪ್ಪಿ ನೆಲದ ಮೇಲೆ ಗುರಿಯಿಲ್ಲದೆ ಮೆಲ್ಲನೆ ನಡೆಯುತ್ತಿದ್ದ ಆಮೆಯನ್ನು ಕಂಡಾಗ ಕನಿಕರ ಉಕ್ಕುತ್ತಿತ್ತು. ಅದನ್ನು ಕೆರೆಗೋ ಬಾವಿಗೋ ತಟಾಯಿಸಿದರೆ ಇನ್ನೊಂದು ಬಗೆಯ ಸಂಭ್ರಮ. ಒಂದು ಜೀವಕ್ಕೆ ಜೀವ ಕೊಟ್ಟ ಹುಸಿ ಪೊಗರು. ಮುಂದೆ ಊಸರವಳ್ಳಿಯನ್ನು ಸಾಯಿಸಿದ ನನ್ನ ಪಾಪಪ್ರಜ್ಞೆ ಕಾಡತೊಡಗಿತು. ನಿರುಪದ್ರವ ಜೀವಿಯೊಂದನ್ನು ಕೊಂದೆನಲ್ಲ ಎಂಬುದು ಈಗಲೂ ನೆನೆಸಿಕೊಂಡಾಗ ಬೇಸರವೇ. ದೊಡ್ಡವರು ಹೇಳುವುದೆಲ್ಲ ಸತ್ಯ ಎಂದು ನಂಬಿದ್ದ ನಾನು ಮತ್ತು ಚಡ್ಡಿ ದೋಸ್ತಿಗಳು ನಮ್ಮೂರ ದುಂಡು ತೋಪಿನಿಂದ ಹಾರಿಹೋಗುತ್ತಿದ್ದ ಬಾವಲಿಗಳನ್ನು ಕಂಡು, ಅವು ಅಮೆರಿಕಕ್ಕೆ ಹೋಗಿ ಹಿಂತಿರುಗಿ ಬರುತ್ತವಂತೆ ಎಂದೇ ನಂಬಿದ್ದೆವು. ಪ್ರಶ್ನಿಸುವಷ್ಟು ಆಗ ಪ್ರಜ್ಞೆ ಇರಲಿಲ್ಲ. ಊರ ಹೊರಗೆ ಬಯಲಿನಲ್ಲಿ ಬಹಿರ್ದೆಶೆಗೆ ಕೂತು ಎದ್ದು ಬರುವಾಗ ಅದೆಂಥ ವಿಸ್ಮಯಲೋಕ ಎದುರಿಗೆ. ಸಗಣಿಯನ್ನು ಉಂಡೆ ಮಾಡಿ ಜಾಮಿಟ್ರಿ ನಮಗೂ ಗೊತ್ತು ಎಂಬಂತೆ ಹುಳುವೊಂದು ತಳ್ಳುತ್ತದೆ, ಇನ್ನೊಂದು ಅದೇ ಬಲದಲ್ಲಿ ತನ್ನತ್ತಲೇ ಎಳೆದುಕೊಂಡು ಹೋಗುವುದನ್ನು ಕಂಡಾಗ ಏನಿದರ ಗುರಿ ಎಂದು ಅರಿಯದೆ ಬಿಟ್ಟ ಕಣ್ಣು ಬಿಟ್ಟು ನೋಡುತ್ತಿದ್ದ ಸಂದರ್ಭಗಳೂ ಉಂಟು.

‘ಅಯ್ಯೋ ತಿಮ್ಮಯ್ಯಾ, ನಮ್ಮ ಮೂಗರಂಗಜ್ಜನ ದನಗಳನ್ನು ಕಿರುಬ ಹಿಡಿಯಿತಂತೆ ಕಣೋ’ ಎಂದು ಊರಿನ ರೈತರು ಮಾತನಾಡುವಾಗ, ತಪ್ಪದೆ ಕಿವಿಗೆ ಬೀಳುತ್ತಿದ್ದ ಇನ್ನೊಂದು ಸಂಗತಿ, ಆ ಕಿರುಬಗಳಿಗೆ ವಿಷ ಹಾಕಬೇಕೆಂಬ ಹುನ್ನಾರ. ನಮಗೆ ಅಂಥ ಕಿರುಬನನ್ನು ನೋಡುವ ಅವಕಾಶ ಎಂದೂ ಸಿಕ್ಕಲಿಲ್ಲ. ಕಡಲೆಗಿಡಗಳನ್ನು ಮೂತಿಯಲ್ಲಿ ತಿವಿದು ಕಾಯನ್ನು ಮುಕ್ಕುತ್ತವೆ ಎಂಬ ಕಾರಣಕ್ಕಾಗಿ ನಮ್ಮೂರಿನ ಜನ ಕಾಡುಹಂದಿಗಳನ್ನು ಹಿಡಿಯಲು ಸಿಡಿ ಒಡ್ಡುತ್ತಿದ್ದುದು ಉಂಟು. ಯುಗಾದಿಯ ಮರುದಿನ ವರ್ಷದ ತಡಕು. ಆಗೆಲ್ಲ ನಮ್ಮೂರ ಜನ ರಾತ್ರಿ ಐದು ಸೆಲ್ಲಿನ ಬ್ಯಾಟರಿ ಹಿಡಿದು ದೊಣ್ಣೆ, ಕೋವಿಗಳ ಸಮೇತ ಊರ ಕುರುಚಲು ಕಾಡುಗಳಿಗೆ ನುಗ್ಗಿ ಮೊಲಗಳನ್ನು ಬೇಟೆಯಾಡುತ್ತಿದ್ದುದುಂಟು. ಅವನ್ನು ದೊಡ್ಡ ಭರ್ಜಿಗೆ ಸಿಕ್ಕಿಸಿ ಊರ ತುಂಬ ಮೆರವಣಿಗೆ ಮಾಡುವಾಗ, ನಮ್ಮೂರಿನ ಹೆಣ್ಣುಮಕ್ಕಳಿಗೆ ಅವರೇ ಹೀರೋಗಳು. ವನ್ಯಜೀವಿಗಳಿರುವುದೇ ಬೇಟೆಗೆ, ಅವೆಲ್ಲವೂ ದುಷ್ಟ ಪ್ರಾಣಿಗಳು ಎಂಬ ನಂಬಿಕೆಯನ್ನು ಚಿಕ್ಕಂದಿನಲ್ಲೇ ತಲೆಗೆ ತುಂಬಿದ್ದರು ನಮ್ಮ ಹಿರಿಯರು. ಮುತ್ತುಗದ ಮರದಿಂದ ಅವೆಷ್ಟು ಜೀರುಂಡೆಗಳನ್ನು ಹಿಡಿದುತಂದು ಅವುಗಳ ಕತ್ತಿಗೆ ದಾರ ಕಟ್ಟಿ ಗಿರಗಿರ ತಿರುಗಿಸಿದಾಗ, ಅವುಗಳಿಂದ ಹೊರಡುತ್ತಿದ್ದ ಜುಯ್ ಜುಯ್ ಶಬ್ದ ನಮ್ಮ ಎದೆಯಲ್ಲಿ ಪುಲಕ ತರುತ್ತಿತ್ತು. ಅವಕ್ಕೆ ಹಿಂಸೆಯಾಗುತ್ತದೆಂದು ಅರೆಗಳಿಗೆಯೂ ಅನ್ನಿಸಿರಲಿಲ್ಲ. ಬೆಂಕಿಪೊಟ್ಟಣದೊಳಗೆ ಒಂದಷ್ಟು ಎಲೆ ತುಂಬಿ ಅವನ್ನು ಕೂಡಿಹಾಕುತ್ತಿದ್ದೆವು. ಇಂಥ ಬಾಲ್ಯದ ಚೇಷ್ಟೆಗಳಿಗೆ ಅವೆಷ್ಟು ಜೀವಿಗಳು ಬಲಿಯಾಗಿವೆಯೋ ಲೆಕ್ಕವಿಲ್ಲ. ಈಗ ಯು.ಆರ್. ಅನಂತಮೂರ್ತಿ ಅವರ ಕವನದ ಸಾಲು ನೆನಪಾಗುತ್ತಿದೆ: ‘ಮತ್ತೆ ಮಳೆ ಹೊಯ್ಯುತ್ತಿದೆ, ಎಲ್ಲ ನೆನಪಾಗುತ್ತಿದೆ.’



ಜೀರುಂಡೆಗಳ ಪ್ರಪಂಚ



ಝೇಂಕಾರಕ್ಕೆ ಹೆಸರಾದ ಜೀರುಂಡೆ

ಈಗ ನಮ್ಮೂರಲ್ಲಿ ಇದ್ದ ಕಾಡೆಲ್ಲ ಬರಡಾಗಿದೆ. ಕಿರುಬಗಳ ಸುಳಿವಿಲ್ಲ. ಯಾವಾಗಲೋ ಒಮ್ಮೆ ಚಿರತೆ ಬಂದು ಹೋದದ್ದೇ ಸುದ್ದಿಯಾಗುತ್ತದೆ. ಕರಡಿಗಳು ಊರಿಂದಾಚೆ ಬಂದು ಹಲಸಿನ ಹಣ್ಣಿನ ಸಮೇತ ಆಗಾಗ ವಾಪಸ್ ಹೋಗುವುದುಂಟು. ಆದರೆ ಕಳೆದ ಐದಾರು ದಶಕಗಳಲ್ಲಿ ಆಗಿರುವ ಬದಲಾವಣೆ ಅನೂಹ್ಯ. ಆಗಿದ್ದ ತೇಗದ ಮರಗಳು ಈಗಿಲ್ಲ, ಧೂಪದ ಗಿಡಗಳೂ ಇಲ್ಲ. ತೂಬರೆ ಎಲೆಗಳನ್ನು ತಂದು ಬೀಡಿ ಕಟ್ಟುತ್ತಿದ್ದ ಮುಸ್ಲಿಂ ಕುಟುಂಬಗಳೂ ಗುಳೆ ಎದ್ದು ಹೋಗಿವೆ. ನಮ್ಮೂರ ರೈತರು ಬೆಟ್ಟದ ನೆಲ್ಲಿಕಾಯಿ ತಂದು ಸಿರಾ ಸಂತೆಯಲ್ಲಿ ಮಾರಿ ಒಂದಷ್ಟು ಕಾಸು ಮಾಡಿಕೊಳ್ಳುತ್ತಿದ್ದರು. ಈಗ ಬೆಟ್ಟದ ನೆಲ್ಲಿಯೂ ಇಲ್ಲ. ಅಷ್ಟೇ ಏಕೆ – ಊರ ಒಳಗಡೆ ಮಲ್ಲಿಗೆ, ಜಾಜಿಗಳೂ ಕಣ್ಮರೆಯಾಗಿವೆ.

## ವಂಶಜರನ್ನೇ ಕೊಂದೆವು

ಈಗ ‘ಜೀವಿವೈವಿಧ್ಯ’ ಎಂಬ ಶಬ್ದ ಶಾಲಾಮಕ್ಕಳ ಬಾಯಲ್ಲಿ ನಲಿಯುತ್ತಿದೆ. ಸಂಶೋಧಕರ ನಿತ್ಯ ಮಂತ್ರವಾಗಿದೆ. ಅರಣ್ಯ ಅಧಿಕಾರಿಗಳ ನಿತ್ಯ ಪಠಣದ ಶಬ್ದವಾಗಿದೆ. ಶಾಲಾಮಾಸ್ತರರಿಂದ ಹಿಡಿದು ವಿಶ್ವಸಂಸ್ಥೆಯ ಪರಿಸರ ವಿಭಾಗದವರೆಗೂ ಸದಾ ಜೀವಿವೈವಿಧ್ಯದ ಬಗ್ಗೆಯೇ ಧ್ಯಾನ. ಕಾಡಿನ ಪರಿಸರವನ್ನೇ ಸರಿಯಾಗಿ ನೋಡದ ನಗರಪ್ರದೇಶಗಳ ಅನೇಕ ಮಕ್ಕಳು ಮೇ 22ರಂದು ಪ್ಲಕಾರ್ಡ್ ಹಿಡಿದು ‘ಕಾಡಿದ್ದರೆ ನಾಡು’ ಎಂದು ಘೋಷವಾಕ್ಯ ಮೊಳಗಿಸುತ್ತಾರೆ. ಆ ಒಂದು ದಿನ



ಚಿಟ್ಟೆಗಳಲ್ಲಿ 17,500 ಪ್ರಭೇದಗಳು